

# ಆ ಮನೆಯಿಂದ ಈ ಮನೆಗೆ

ಎಂ.ಎಸ್. ಅನಂತರಾಮ್

**ಅಲ್ಲಿದೆ ನಮ್ಮ ಮನೆ, ಇಲ್ಲಿ ಬಂದೆ ಸುಮ್ಮನೆ ಎಂದು ಪುರಂದರ ದಾಸರು ಹಾಡಿದರು. ಇಲ್ಲಿಗೆ ಸುಮ್ಮನೆ ಬಂದಿರುವ ನಮ್ಮನ್ನು ಕಾಪಾಡಲು ಶ್ರೀರಾಮಕೃಷ್ಣರು ಈ ಮನೆಗೆ ಬರುತ್ತಾರೆ. ಇದರ ಮೂಲಕ ಆ ಮನೆಯ ನೆನಪು ಮಾಡಿಕೊಡುತ್ತಾರೆ. ಶ್ರೀರಾಮ ಕೃಷ್ಣರ ಅಹೇತುಕ ಕೃಪೆಯನ್ನು ಚಿತ್ರಿಸುವ ಈ ಲೇಖನ ವನ್ನು ಬರೆದ ಶ್ರೀ ಅನಂತರಾಮ್ ಅವರು ಹೊಸಕೋಟೆಯಲ್ಲಿರುವ ಸ್ವಾಮಿ ವಿವೇಕಾನಂದ ಸೇವಾಕೇಂದ್ರದ ಅಧ್ಯಕ್ಷರಾಗಿರುವರು.**

ಶ್ರೀರಾಮಕೃಷ್ಣಶಕ್ತಿ ದಿಕ್‌ದಿಗಂತದಲ್ಲಿ ಜಾಗೃತವಾಗಿದೆ. ಅದರ ಪೂರ್ಣತೆಯನ್ನು ಭಾವಿಸಿಯೇ ಅನುಭವಿಸಬೇಕು. ವಿದೇಹದಲ್ಲಿರುವ (ಆ ಮನೆಯಲ್ಲಿರುವ) ಶ್ರೀರಾಮಕೃಷ್ಣರನ್ನು ಈ ದೇಹದಲ್ಲಿ (ಈ ಮನೆಯಲ್ಲಿ) ಅನುಭವ ಪಡೆಯುತ್ತಾ ಆನಂದಿಸಬೇಕು.

ಭಕ್ತೆಯಾದ ರಾಣಿ ರಾಸ್ಮಣಿ ಅಪಾರ ಸಂಪತ್ತಿನಿಂದ ಕೂಡಿದ್ದವಳು. ಆಕೆ ಒಮ್ಮೆ ಕಾಶಿಗೆ ಯಾತ್ರೆ ಹೋಗುವ ನಿರ್ಧಾರ ಕೈಗೊಂಡಳು. ಆದರೆ ರಾತ್ರಿ ಕನಸಿನಲ್ಲಿ ಕಾಳಿಮಾತೆ ಕಾಣಿಸಿಕೊಂಡು, 'ನನ್ನನ್ನು ಇಲ್ಲೇ ಪ್ರತಿಷ್ಠಾಪಿಸು! ನಾನಿಲ್ಲಿಯೆ ನೆಲೆಸುವೆ!' ಎಂದು ತಿಳಿಸಿದಳು. ಅಂತೆಯೇ ದಕ್ಷಿಣೇಶ್ವರದಲ್ಲಿ 'ಕಾಳಿ ದೇವಾಲಯ' ನಿರ್ಮಾಣವಾಯಿತು. ಅಲ್ಲಿ ಶ್ರೀರಾಮಕೃಷ್ಣರು ಕಾಳಿಯ ವಿಗ್ರಹವನ್ನು ಸಚೇತನಗೊಳಿಸಿದರು. ಅದೇ ಅವರ ಲೀಲಾಸ್ಥಾನವಾಗಿಬಿಟ್ಟಿತು. ಕಾಳಿಯು ಆ ಮನೆಯಿಂದ ಈ ಮನೆಗೆ ಬರುವಂತೆ ಶ್ರೀರಾಮಕೃಷ್ಣರು ಈ ಮನೆಯಿಂದ ಆ ಮನೆ (ಕಾಳಿಯ ಭಕ್ತರಾಗಿ) ಸೇರಿದರು.

ಯುಗಾವತಾರ ಶ್ರೀರಾಮಕೃಷ್ಣರು ಅವತಾರ ಅಂತ್ಯಗೊಳಿಸಿದಾಗ ಶಾರದಾಮಾತೆಯವರು ತಮ್ಮ ಬಳೆಗಳನ್ನು ತೆಗೆಯಲು ಹೊರಟಾಗ ಶ್ರೀರಾಮಕೃಷ್ಣರು ಕಾಣಿಸಿಕೊಂಡು, 'ಆ ಬಳೆಗಳನ್ನೇಕೆ ತೆಗೆಯುವೆ? ನಾನು ಈ ಮನೆಯಿಂದ ಆ ಮನೆಗೆ ಹೋಗಿರುವೆನಷ್ಟೆ! ಕೂಗಿ ಕರೆದರೆ ಬಂದೇ ಬರುವೆನು!' ಎಂದರು.

ಈಗಲೂ ಶ್ರೀರಾಮಕೃಷ್ಣರು ಭಕ್ತರೆಲ್ಲರ ಹೃದಯದಲ್ಲಿ ವಿರಾಜಿಸುತ್ತಿದ್ದಾರೆ. ನಾವು ಪರಿಪೂರ್ಣ ಭಕ್ತಿಭಾವದಿಂದ ಪೂಜಿಸುತ್ತಿಲ್ಲವಷ್ಟೆ. ಯುಗಾವತಾರಿ ಹೇಳುತ್ತಾರೆ, 'ಜನ ಕೊಡಗಟ್ಟಲೆ ಕಣ್ಣೀರು ಸುರಿಸುವರು. ಆದರೆ ಅದು ದೇವರಿಗಾಗಲ್ಲ! ಸ್ವಾರ್ಥಕ್ಕಾಗಿ.' ಇಂಥ ಮನೆಗಳಲ್ಲಿ ಶ್ರೀರಾಮಕೃಷ್ಣರು ವಾಸ ಮಾಡುವರೆ? ಈ ಸಂದರ್ಭದಲ್ಲಿ ಸ್ವಾಮೀಜಿಯವರೊಬ್ಬರು ತಮ್ಮ ಅನುಭವದ ಘಟನೆಯನ್ನು ಈ ರೀತಿ ವಿವರಿಸುತ್ತಾರೆ: 'ಊಟಿಯಲ್ಲಿದ್ದ ಭಕ್ತರೊಬ್ಬರು ಆಶ್ರಮ ದರ್ಶನಕ್ಕೆ ಆಗಾಗ ಬರುತ್ತಿದ್ದರಂತೆ. ಒಮ್ಮೆ ಮನೆಯ ಮೆಟ್ಟಲು ಹತ್ತುವಾಗ ಜಾರಿ ಬೀಳುವುದರಲ್ಲಿದ್ದರು. ಆ ಸಮಯದಲ್ಲಿ ಅವರು ಶ್ರೀರಾಮಕೃಷ್ಣರನ್ನು ನೆನೆದರು. ಆಗ ಯಾರೋ ಹಿಂದಿನಿಂದ ಅವರನ್ನು ಹಿಡಿದು ಕಾಪಾಡಿದ ಹಾಗಾಯಿತಂತೆ! ನೋಡಿದಿರಾ! ಶ್ರೀರಾಮಕೃಷ್ಣರು ಭಕ್ತರಿಗಾಗಿ ಆ ಮನೆಯಿಂದ ಈ ಮನೆಗೆ ಹೇಗೆ ಧಾವಿಸಿ ಬರುತ್ತಾರೆ!'

ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಭೆಯನ್ನು ಕೆಲವು ಕಿಡಿಗೇಡಿಗಳು ಸಹಿಸದೆ ಚಹಾದಲ್ಲಿ ವಿಷವನ್ನು ಬೆರೆಸಿ ನೀಡಿಬಿಟ್ಟಿದ್ದರು. ಸ್ವಾಮೀಜಿಯವರು 'ಜೈ ರಾಮಕೃಷ್ಣ' ಎಂದು ಅದನ್ನು ಕುಡಿಯಲನುವಾದಾಗ ಆ ಚಹಾದಲ್ಲಿ ಗುರುದೇವರು ಕಾಣಿಸಿಕೊಂಡು 'ಕುಡಿಯಬೇಡ!' ಎಂದು ಹೇಳಿದರು. ಇದೇ ಅಲ್ಲವೆ ಪರಮಹಂಸರ ಪರಮಕೃಪೆ!

ದಂಪತಿಗಳಾದ ನವಗೋಪಾಲ್ ಘೋಷ್ ಮತ್ತು ನಿಸ್ತಾರಿಣೀ ದೇವಿ ದೈವಭಕ್ತರು. ಅವರು ಶ್ರೀರಾಮಕೃಷ್ಣರ ವಿಗ್ರಹವನ್ನು ತಮ್ಮ ಮನೆಯಲ್ಲಿ ಪ್ರತಿಷ್ಠಾಪನೆ ಮಾಡಲು ಸ್ವಾಮಿ ವಿವೇಕಾನಂದರನ್ನು ಕೇಳಿಕೊಂಡರು. ಸ್ವಾಮೀಜಿ ಶ್ರೀರಾಮಕೃಷ್ಣರ ವಿಗ್ರಹವನ್ನು ಪ್ರತಿಷ್ಠಾಪಿಸಿ ಅವರನ್ನು ಆ ಮನೆಯಿಂದ ಈ ಮನೆಗೆ ಕರೆತಂದರು. ಆ ಸಮಯದಲ್ಲಿ ಸ್ವಾಮೀಜಿ ಧ್ಯಾನಾಸಕ್ತರಾಗಿದ್ದಾಗ ತಾನೇ ತಾನಾಗಿ ಈ ಋಷಿಮಂತ್ರ ಅವರಿಂದ ಹೊರಕ್ಕೆ ಬಂದಿತು:

**ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ |**
**ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ||**

ಪ್ರತಿವರ್ಷ ಜನವರಿಯ ಒಂದನೇ ತಾರೀಖು ಕಲ್ಪತರು ದಿವಸ ವೆಂದು ಆಚರಿಸುತ್ತೇವೆ. ಆ ದಿನ ಶ್ರೀರಾಮಕೃಷ್ಣರು ವಿಶೇಷವಾಗಿ ಆ ಮನೆಯಿಂದ ಈ ಮನೆಗೆ ಬರುತ್ತಾರೆ. ಈ ಮನೆ ಪರಿಶುದ್ಧ ವಾಗಿರಬೇಕಲ್ಲವೆ? ನಾವು ಸತ್ಯವಂತರಾದ ಭಕ್ತರಾಗಿರಬೇಕು. ಆಗ ಮಾತ್ರವೇ ಶ್ರೀರಾಮಕೃಷ್ಣರು ಕಲ್ಪತರುವಾಗಿ ಕಾಮಧೇನುವಿನಂತೆ ಕಾಪಾಡುತ್ತಾರೆ.

ಒಮ್ಮೆ ಶ್ರೀರಾಮಕೃಷ್ಣರು ಗಿರೀಶ್‌ಚಂದ್ರ ಘೋಷ್‌ರನ್ನು 'ನನ್ನ ಬಗ್ಗೆ ನೀನು ಏನು ತಿಳಿದುಕೊಂಡಿರುವೆ?' ಎಂದು ಕೇಳಿದಾಗ ಭಕ್ತ ಗಿರೀಶನು, 'ವಾಲ್ಮೀಕಿ, ವ್ಯಾಸ ಮಹರ್ಷಿಗಳಿಗೇ ನಿಮ್ಮನ್ನು ವಿವರಿಸಲಸಾಧ್ಯವಾಗಿರುವಾಗ ಇನ್ನು ಅದು ನನ್ನಿಂದ ಸಾಧ್ಯವೆ?' ಎಂದು ನಮಿಸಿದ. ಇವೆಂಥ ದಿವ್ಯವಾದ ನುಡಿಗಳು! ಶ್ರೀರಾಮಕೃಷ್ಣರು ಆ ಮನೆಯಿಂದ ಬಂದು ಇಲ್ಲಿ ಅವತರಿಸಿರುವರಲ್ಲವೆ? ಅಂಥ ಮೂಲ ಮಹಾಮಹಿಮನನ್ನು ವರ್ಣಿಸಲು ಯಾರಿಗೆ ತಾನೆ ಸಾಧ್ಯ?

ಮತ್ತೊಂದು ಪ್ರಸಂಗ. ಮ್ಯಾಕ್ಸ್‌ಮುಲ್ಲರ್ ಎಂಬ ಪಾಶ್ಚಿಮಾತ್ಯ ಸಾಹಿತಿ ಮತ್ತು ತತ್ತ್ವಜ್ಞಾನಿ, ವೇದಗಳನ್ನು ಆಂಗ್ಲಭಾಷೆಗೆ ಅನುವಾದ ಮಾಡಿದ ಮಹಾಜ್ಞಾನಿ. ಸ್ವಾಮಿ ವಿವೇಕಾನಂದರು ಅವನನ್ನು ಭೇಟಿಮಾಡಲು ಹೋಗಿದ್ದರು. ಅವನಿಗೆ ಶ್ರೀರಾಮಕೃಷ್ಣರ ಮೇಲೆ ಅಪಾರ ಭಕ್ತಿ. ಅವನಾಗಲೇ ಅವರ ಮೇಲೆ ಒಂದು ಲೇಖನವನ್ನು ಬರೆದು ಪ್ರಕಟಿಸಿದ್ದ. ಅವರ ಮೇಲೆ ಒಂದು ಪುಸ್ತಕವನ್ನು ಬರೆಯುವ ಉದ್ದೇಶದಿಂದ ಅವನು ಸ್ವಾಮೀಜಿಯವರನ್ನು ಶ್ರೀರಾಮಕೃಷ್ಣರ ಬಗ್ಗೆ ಹೇಳಿ ಎಂದು ಕೇಳಿಕೊಂಡಾಗ ಸ್ವಾಮೀಜಿ ಹೇಳುತ್ತಾರೆ : 'ಶ್ರೀರಾಮಕೃಷ್ಣರು ಸರ್ವಜ್ಞ, ಸರ್ವಸ್ವ, ಸರ್ವವ್ಯಾಪಿ! ಆದ್ದರಿಂದ ಅವರ ಬಗ್ಗೆ ಏನು ಹೇಳಲಿ? ಹೇಗೆ ತಿಳಿಸಲಿ?' ಆ ವಿದೇಹರೂಪದ ಶ್ರೀರಾಮಕೃಷ್ಣರನ್ನು ಈ ಮನೆಯ ಮಿತಿಯಲ್ಲಿ ತಿಳಿಸುವುದಾದರೂ ಹೇಗೆ? ಅನಂತರ ಸ್ವಾಮಿ ಶಾರದಾನಂದರ ಮೂಲಕ ಅವನಿಗೆ ಶ್ರೀರಾಮಕೃಷ್ಣರ ಬಗ್ಗೆ ಮಾಹಿತಿಯನ್ನು ಒದಗಿಸಿದರು.

ಶ್ರೀರಾಮಕೃಷ್ಣರು ಯಾವ ಪಂಗಡವನ್ನೂ ಮಾಡಲಿಲ್ಲ, ಒಂದು ಪಂಗಡಕ್ಕೆಂದು ಬೋಧಿಸಲಿಲ್ಲ, ಅಥವಾ ಹಿಂದಿನ ಮತಾಚಾರ್ಯ ರಂತೆ ಭಾಷ್ಯಗಳನ್ನೂ ಬರೆಯಲಿಲ್ಲ. ಆದರೆ ಸರ್ವಧರ್ಮ ಸಮನ್ವಯದ ಆದರ್ಶವನ್ನು ಆಚರಣೆಯಲ್ಲಿ ತಂದು ತೋರಿಸಿದರು. ಕಾಮಕಾಂಚನ ತ್ಯಾಗ, ವೈರಾಗ್ಯ ಮತ್ತು ಸತ್ಯವ್ರತಕ್ಕೆ ಇವರೇ ಮೂರ್ತಿ ಸ್ವರೂಪರಾಗಿದ್ದಾರೆ, ಈಗಲೂ ನಮ್ಮಲ್ಲಿ ಸಚೇತನರಾಗಿದ್ದಾರೆ.

ಒಮ್ಮೆ ನವಗೋಪಾಲ್ ಘೋಷ್‌ರವರ ಪತ್ನಿ ನಿಸ್ತಾರಿಣೀ ದೇವಿ ಶ್ರೀರಾಮಕೃಷ್ಣರನ್ನು ಪ್ರಸಾದ ಸ್ವೀಕರಿಸಲು ಆಮಂತ್ರಿಸಿದ್ದಳು. ಆ ಸಮಯದಲ್ಲಿ 'ತನ್ನ ಕೈಯಿಂದಲೇ ಶ್ರೀರಾಮಕೃಷ್ಣರಿಗೆ ಪ್ರಸಾದ ತಿನ್ನಿಸಬೇಕು' ಎಂದು ಮನಸ್ಸಾಗಿ ಸಿಹಿ ತಿಂಡಿಯನ್ನು ತರುತ್ತಿದ್ದಳು. ಆಗ ಶ್ರೀರಾಮಕೃಷ್ಣರು, 'ನೋಡು, ತಾಯಿ, ಆ ಸಿಹಿ ತಿಂಡಿಯನ್ನು ನೀನೇ ನನ್ನ ಬಾಯಿಗೆ ಹಾಕಿಬಿಡು' ಎಂದು ಬಾಯಿ ತೆಗೆದರು! ಆಕೆಗೆ ಆಶ್ಚರ್ಯವೂ ಭಯವೂ ಆಯಿತು! ಶ್ರೀರಾಮಕೃಷ್ಣರ ಬಾಯಲ್ಲಿ ಸರ್ಪವೊಂದು ಎಲ್ಲವನ್ನೂ ತಿನ್ನುತ್ತಿದ್ದುದನ್ನು ಆಕೆ ಕಂಡಳು! ಆಕೆ ಹಿಂತೆಗೆದಾಗ ಅಲ್ಲಿಯೇ ಇದ್ದ ಒಬ್ಬ ಶಿಷ್ಯರು, 'ಶ್ರೀರಾಮಕೃಷ್ಣರಿಗೆ ಕುಂಡಲಿನೀ ಶಕ್ತಿ ಕಂಠದಲ್ಲೇ ಇರುತ್ತದೆ. ಭಯ ಪಡದೆ ತಿನ್ನಿಸಿ!' ಎಂದರು. ಶ್ರೀರಾಮಕೃಷ್ಣರಿಗೆ ಕುಂಡಲಿನೀ ಶಕ್ತಿ ಸದಾ ಸಹಸ್ರಾರದಲ್ಲಿ (ಆ ಮನೆಯಲ್ಲಿ) ಇದ್ದು ನಮ್ಮೊಡನಿರುವಾಗ (ಮಾತನಾಡುವಾಗ, ತಿನ್ನುವಾಗ) ಮಾತ್ರ ಅದು (ಈ ಮನೆಗೆ) ಕಂಠ ಕ್ಕಿಳಿಯುತ್ತಿತ್ತು.

ಮತ್ತೊಂದು ಪ್ರಸಂಗ. ಕಾಶೀಪುರದಲ್ಲಿ ನಡೆದ ಘಟನೆ. ಭಕ್ತೆಯೊಬ್ಬಳಿಗೆ ಬಹಳ ದಿನಗಳವರೆಗೆ ಶ್ರೀರಾಮಕೃಷ್ಣರನ್ನು ಭೇಟಿ ಮಾಡಲಾಗಲಿಲ್ಲ. ಆದ್ದರಿಂದ ಆಕೆ ಇತರರ ಮೂಲಕ ಶ್ರೀರಾಮ ಕೃಷ್ಣರ ಭಾವಚಿತ್ರವನ್ನು ತರಿಸಿಕೊಂಡು ಪೂಜಿಸುತ್ತಿದ್ದಳು. ಕೆಲವು ತಿಂಗಳ ಬಳಿಕ ಶ್ರೀರಾಮಕೃಷ್ಣರು ಆ ಭಕ್ತೆಯ ಮನೆಗೆ ಹೋಗಿ, 'ಎಲ್ಲಿ, ಆ ನನ್ನ ಭಾವಚಿತ್ರ?' ಎಂದು ಕೇಳಲು, ಆಕೆ ಅದನ್ನು ಭಕ್ತಿಯಿಂದ ತೋರಿಸಲು, ಮತ್ತೆ ಹೇಳಿದರು, 'ಈ ಚಿತ್ರ ಮನೆ ಮನೆಗಳಲ್ಲಿ ಬೆಳಗುತ್ತ, ಪಾಶ್ಚಿಮಾತ್ಯ ದೇಶಗಳಿಗೂ ಪ್ರಯಾಣ ಬೆಳೆಸುತ್ತದೆ!' ಎಂದರು. ಅವರ ಮಾತು ನಿಜವಾಯಿತು. ಇಂದು ಅವರ ಭಾವಚಿತ್ರ ಮನೆಮನೆಗೆ, ಹಳ್ಳಿಹಳ್ಳಿಗೆ ಹಬ್ಬುತ್ತಿದೆ! ಅವರು ಮಹಾಸಮಾಧಿಯ ಬಳಿಕ ಆ ಮನೆಗೆ ಹೋದರೂ ಭಾವದ ಮೂಲಕ ಮನೆಮನೆಗಳಲ್ಲಿ ಮತ್ತು ವಿದೇಶಗಳಲ್ಲಿ (ಈ ಮನೆಯಲ್ಲಿ) ಹೆಚ್ಚು ಹೆಚ್ಚು ವಿಶಾಲವಾಗುತ್ತಿದ್ದಾರೆ. ಭಾವಚಿತ್ರಗಳು ಪ್ರತಿದಿನವೂ ನೂರ್ಮಡಿಯಷ್ಟು ಹರಡುತ್ತಿವೆ.

ಒಮ್ಮೆ ಭಕ್ತನೊಬ್ಬ ಶ್ರೀರಾಮಕೃಷ್ಣರ ಭಾವಚಿತ್ರ ತೆಗೆಯಲು ಬಂದು ಅವರನ್ನು ಪ್ರಾರ್ಥಿಸಿಕೊಂಡಾಗ ಗುರುಮಹಾರಾಜರು ಸಹಜ ವಾಗಿಯೇ ಒಪ್ಪಲಿಲ್ಲ. ಭಕ್ತ ಬಿಡಬೇಕಲ್ಲ! ಕೊನೆಗೆ, ಶ್ರೀರಾಮ ಕೃಷ್ಣರು ಸಮಾಧಿಯಲ್ಲಿರುವಾಗ ಛಾಯಾಗ್ರಾಹಕನಿಗೆ ಹೇಳಿ ಕಳಿಸಿದರು. ಆತ ಬಂದು ಅವರ ಮುಖವನ್ನು ಸ್ವಲ್ಪ ಮೇಲೆ ಮಾಡಲು ಗಲ್ಲವನ್ನು ಹಿಡಿದು ಎತ್ತಿದಾಗ ದೇಹವೇ ಮೇಲೆದ್ದು ಬಿಟ್ಟಿತಂತೆ! ದೇಹ ಅಷ್ಟು ಹಗುರವಾಗಿತ್ತು. ಆತನಿಗೆ ಆಶ್ಚರ್ಯವಾಯಿತು! ಸಮಾಧಿಯಲ್ಲಿರುವಾಗ ಗುರುಮಹಾರಾಜರು ಆ ಮನೆಗೆ ತೆರಳಿರು ತ್ತಾರೆ. ಸಮಾಧಿಯಿಂದ ಎಚ್ಚೆತ್ತಾಗ ಈ ಮನೆಗೆ (ದೇಹಕ್ಕೆ) ಬರುತ್ತಿರು ತ್ತಾರೆ.

ಶ್ರೀರಾಮಕೃಷ್ಣರು ತಮ್ಮನ್ನು ತೋರಿಸುತ್ತಾ ಶಾರದಾ ಮಾತೆಯವರಿಗೆ 'ಇದೊಂದು ಪ್ರತಿಬಿಂಬ. ಇದರ ಬಿಂಬ ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತದೆ' ಎಂಬುದಾಗಿ ಹೇಳಿದರು. ಅಕ್ಷರಶಃ ಈ ಮಾತು ಸತ್ಯವಾಗುತ್ತಲೇ ಇದೆ.

ಹೀಗೆ ಅವತಾರವರಿಷ್ಠರಾದ ಶ್ರೀರಾಮಕೃಷ್ಣರು ಆ ದಿವ್ಯಮನೆ ಯಿಂದ ಈ ನಮ್ಮ ಮನೆಗೆ ಭಕ್ತಿಯಿಂದ ಕರೆದರೆ ಬರುತ್ತಾರೆ. ಅದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ.